R No KARN 12

16-3-1975

58 th Year ನೇ ವರ್ಷ

ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

ಸತ್ಯವಾದಿ
SATYAVADI

Golden Jubilee Celebrated Paper

Satyavadi Daily Mysore 4

– For Influential Publicity –

ಸ್ಥಾಪಕರು ಆರಮನೆ ಸರಸ್ವಜ್ಞಾರ್ ಎಂ. ವಿ. ಸುಬ್ಬರಾವ್ ಸಂಪಾದಕರು ವರ್ಮಸ್ಥ ಶಾಂತವೀರ ಎಂ. ಎಸ್. ಕೃಷ್ಣರಾವ್ (3 ಕ್ಷ

ಬಾವುಟ ಹೊಂದಲು ರಾಜಗಳಿಗೆ ಅವಕಾಶ ಇಲ

ಧಾರವಿಯಾರಿಗೆ ಸ್ವಾಗತ

ಪೂನಾ — ಸಿಕಂದರಾಬಾದ್ ಎಕ್ಸ್‌ಪ್ರೆಸ್‌ನಲ್ಲಿ ಇಲ್ಲಿಗೆ ಬಂದ, ಕೇಂದ್ರ ವಾಣಿಜ್ಯ ವಸತಿ ಮಂತ್ರಿ ಶ್ರೀ ಮೋಹನ ಧಾರವಿಯಾ ರವನ್ನು ಸಹಸ್ರಗಟ್ಟಲೆ ಜನರ ಗುಂಪು ಸ್ವಾಗತಿಸುತ್ತಾ, ಧಾರವಿಯಾ ಜಿಂದಾಬಾದ್ ಎಂಬುದಾಗಿ ಘೋಷಿಸಿದರು ಜಯಪ್ರಕಾಶ ನಾರಾಯಣರನ್ನು ನಿಂದಿಸುತ್ತಾ, ಅವರನ್ನು ಫ್ಯಾಸಿಸ್ಟ್ ಎಂದು ಕರೆಯುತ್ತಾ ಇದ್ದರೆ ಅದರಿಂದ ದೇಶ ಎದುರಿಸುತ್ತಿರುವ ಸಮಸ್ಯೆಯ ಪರಿಹಾರ ಸಾಧ್ಯವಿಲ್ಲ ಎಂದು ಅವರು ಗುಂಪನ್ನು ಉದ್ದೇಶಿಸಿ ಭಾಷಣವನ್ನು ಮುಂದುವರಿಸುತ್ತಾ ತಿಳಿಸಿದರು

●

ಓರ್ವನ ಮರಣ

ಅನುಂಪವತಿ — ಮುಲ್ಬಾಪಿ ರೈಲ್ವೆ ನಿಲ್ದಾಣದ ಹತ್ತಿರದಲ್ಲಿರುವ ಒಂದು ಗಣಪತಿ ಮೇಲಿರುವ ಶ್ರೀ ಮಹಾದೇವಸ್ವಾಮಿ ದರ್ಶನಕ್ಕೆ ಶಿವರಾತ್ರಿ ದಿನ ೫ ಲಕ್ಷ ಜನರು ಬಂದಿದ್ದರು ಮೆಟ್ಟಿಲುಗಳಲ್ಲಿನಲ್ಲಿ ಓ ಸತ್ತು ಹಲವರು ಗಾಯಗೊಂಡರು

★

ಪಿಕೆಟ್ ನಡೆಸಲು ಕರೆ

ಸೇವಾಗ್ರಾಮ — ಮದ್ಯ ಸಂಬಂಧದ ಸೆಮಿನಾರ್‌ನ್ನು ಉದ್ಘಾಟಿಸುತ್ತಾ, ಶ್ರೀ ಜಯಪ್ರಕಾಶ ನಾರಾಯಣರು, ದೇಶದಲ್ಲಿ ಪಾನನಿರೋಧ ಜಾರಿಗೆ ಬರಲು ಮಹಿಳೆಯರು ಮದ್ಯದ ಅಂಗಡಿ ಮುಂದೆ ಪಿಕೆಟ್ ನಡೆಸಬೇಕೆಂದು ಕರೆ ಇತ್ತರು

★

ಆಗಮನ

ಪೂನಾ — [illegible] ಗಾಯಕಿ ಕುಂದ ಶ್ರೀ ಜಯಪ್ರಕಾಶ ನಾರಾಯಣರವರು ಮೈಂಗಳನಲ್ಲಿ ಕರ್ನಾಟಕ, ತಮಿಳುನಾಡು ಮತ್ತು ಕೇರಳದಲ್ಲಿ ಪ್ರವಾಸ ಮಾಡುವರು ಬೆಂಗಳೂರಿಗೆ ಅವರು ಮೇ 12 ರಂದು ಬರುವ ಕಾರ್ಯಕ್ರಮವಿದೆ.

ಅವಕಾಶ ಇಲ್ಲ

ಮದಂಸು — ರಾಜ್ಯಗಳು ತಮ್ಮದೇ ಆದ ಧ್ವಜಗಳನ್ನು ಹೊಂದಲು ಅವಕಾಶ ಕೊಡುವುದಿಲ್ಲವೆಂದು ಪತ್ರಿಕೆಯವರಿಗೆ ಭಾರತ ಸರ್ಕಾರದ ಗೃಹಮಂತ್ರಿ ಶ್ರೀ ಜ್ಞಾನಿ ಜೈಲ್ ಸಿಂಗ್ ತಿಳಿಸಿದರು 1970 ರಲ್ಲಿ ನಡೆದ ಮುಖ್ಯ ಮಂತ್ರಿಗಳ ಸಮ್ಮೇಳನದಲ್ಲಿ ಆದ ತೀರ್ಮಾನದಲ್ಲಿ ಯಾವ ಬದಲಾವಣೆ ಇಲ್ಲವೆಂದು ಅವರು ತಿಳಿಸಿದರು.

★

ಸರ್ಕಾರದ ಇಚ್ಛೆ

ಹುಬ್ಬಳ್ಳಿ — ಹಾವೇರಿ ತಾಲ್ಲೂಕಿನಲ್ಲಿ 60 ಮೈಲಿಗಳು ಹರಿಯುತ್ತಿರುವ ವರದಾ ನದಿಯಲ್ಲಿ ಅಡ್ಡಲಾಗಿ ಹಕ್ಕು ಬ್ಯಾರೇಜ್ ಸ್ಟ್ರಾಜೆಕ್ಟ್‌ಗಳನ್ನು ಸಾಧ್ಯವಾದಷ್ಟು ಬೇಗ ಪೂರ್ಣಗೊಳಿಸುವುದು ಸರ್ಕಾರದ ಇಚ್ಛೆ ಆಗಿದೆ ಎಂದು ಮುಖ್ಯ ಮಂತ್ರಿ ಶ್ರೀ ಡಿ. ದೇವರಾಜ ಅರಸ್ ರವರು ಕೊಪರಿಟ್ಟಿಯಲ್ಲಿ ರೂ. 85 ಲಕ್ಷದ ಬ್ಯಾರೇಜ್ ಮತ್ತು ಸೇತುವೆಗೆ ಶಂಕುಸ್ಥಾಪನೆ ಮಾಡುತ್ತಾ ತಿಳಿಸಿದರು.

●

ಪ್ರಧಾನರ ಅಚ್ಛೆ

ಬೆಂಗಳೂರು — ಮುಖ್ಯ ಇಂಜಿನಿಯರ್ ಮುಗ್ಧುಂರ ಸಪ್ಲೈಂಡು ಮಾಡಬೇಕೆಂಬ ನಿರ್ಮಾಣ ಇಂಜಿನಿಯರಿಂಗ್ ಪ್ಲೈಲುಗಳ ಪರೀಕ್ಷಣೆಗೆ ತಮಗೆ ಅವಕಾಶ ಕೊಡಬೇಕೆಂಬ ವಿರೋಧಿ ಪಕ್ಷದ ಒತ್ತಾಯ ಅಧಿಕವಾಗಿ ಬಿಸಿ ಏರಿ, ಆಡಳಿತ ಪಕ್ಷ ಕಂದ 91 ವಿರೋಧ ಪಕ್ಷದ ಸದಸ್ಯರನ್ನು ಸಸ್ಪೆಂಡು ಮಾಡಬೇಕೆಂಬ ಸೂಚನೆಯಂತೆ ಅವರನ್ನು ಸಭೆಯಿಂದ ಹೊರಹೋಗುವಂತೆ ತಿಳಿಸಿದರು

●

ಬಿಜಾಪುರದಲ್ಲಿ ಜೋಳದ ಅಭಾವ ಪರಿಹಾರಕ್ಕೆ ಜಿಲ್ಲಾಧಿಕಾರಿಗಳ ಅಹಾರ ಸಹಾಯಕರ ಸೇವಾ ಓ ಅಯಿತು.

ಸಂಪೂರ್ಣ ಮೌನ

ಪೌನಾರ್— ಸರ್ವೋದಯ ಸಂಪೂರ್ಣ ಕಾರ್ಯಕಾರಿ ಸಮಿತಿ ಸದಸ್ಯರು ರಾಜೀನಾಮೆ ಕೊಟ್ಟಿದ್ದೂ, ಜನರಲ್ ಬಾಡಿ ಸದಸ್ಯರೂ ರಾಜೀನಾಮೆ ಕೊಡುವ ಪರಿಸ್ಥಿತಿ ಒದಗಲು, ಆಚಾರ್ಯ ವಿನೋಬಾ ಭಾವೆಯವರು ತಮ್ಮ ಮೌನವನ್ನು ಮುರಿದು, ಚರ್ಚೆ ನಡೆಸಿದರು – ಭಾವೆಯವರ ಒಂದು ವರ್ಷದ ಮೌನ ಪುಣ್ಯಯುವವರಿಗೆ ಸಂಪೂರ್ಣ ಮೌನವಹಿಸಿರಲೆಂಬ ಸಲಹೆಗೆ ಭಾವೆಯವರೂ ಜಯಪ್ರಕಾಶರೆಯವರೂ ಒಪ್ಪಿದರು.

○

ವಿಶ್ವ ಕಪ್ ಹಾಕಿ ಪಂಥ

ಕೌಲಲಂಪುರ— ಮಲೇಶಿಯಾ ಕ್ರೀಡಾಂಗಣದಲ್ಲಿ 47000 ಪ್ರೇಕ್ಷಕರಿದ್ದು ನಡೆದ ಆಟದಲ್ಲಿ ಭಾರತವು ಮಲೇಶಿಯಾವನ್ನು ಸೋಲಿಸಿ, ಪಾಕಿಸ್ತಾನದೊಡನೆ ಫೈನಲ್ಸ್‌ಗೆ ಏರಿತು, ಗೆದ್ದಿತು.

○

ಪೋಲೀಸು ಫೈರಿಂಗಿಗೆ ಹೆಣ್ಣಿನ ಬಲಿ

ಥಾಣಾ ಜಿಲ್ಲೆಯ ಬೆಂಡೆ ಗ್ರಾಮದ 21 ವರ್ಷದ ಒಬ್ಬ ಆದಿವಾಸಿ ಮಹಿಳೆಯು ಫೆಬ್ರವರಿ 25 ರಂದು ರಾತ್ರಿ ಇಬ್ಬರು ಪೋಲೀಸು ಪೇದೆಯು ಕಾಮೇಚ್ಛೆ ತೀರಿಸಲು ನಂತರದ ಕೆಲವೇ ನಿಮಿಷಗಳಲ್ಲಿ ಅವಳ ಮನೆಯನ್ನು ಸುಟ್ಟುಹಾಕಿದರು.

★

ಕೃತಿಭಟನಾ ಮೆರವಣಿಗೆ

ಮಂಗಳೂರು— ಕಾರವಾರ ತೀವಿನ ಪತ್ತಿರದ ತಮ್ಮ ಭೂಮಿಯಿಂದ ಹೊರದೂ ಹಲ್ಪಟ್ಟ 200 ಜನರು ಈಚೆಗೆ ಮೆರವಣಿಗೆಯಲ್ಲಿ ಪೌರಸಭಾ ಕಚೇರಿ ಹತ್ತಿರ ಬಂದಾಗ ಪೋಲೀಸರು ತಡೆದದ್ದರಿಂದ ಅಲ್ಲೇ ಕುಳಿತುಬಿಟ್ಟರು – ನಂತರ ಜಿಲ್ಲಾಧಿಕಾರಿಗಳು ಅವರ ಕುಂದುಕೊರತೆಗಳನ್ನು ಅವರಿಗೆ ನಿಯೋಗದವರಿಂದ ತಿಳಿದುಕೊಂಡರು.

ಅದಕ್ಕೂ ವೃದ್ಧರೆ

ಪಶ್ಚಿಮ ಜರ್ಮನಿಯ ಹಾನೋವರ್‌ನ ನಗರ ಆಡಳಿತಗಾರರಿಗೆ, ಅಲ್ಲಿಯ ವೃದ್ಧರ ಬಗ್ಗೆ ಸಲಹೆ ನೀಡಲು 65 ವರ್ಷಗಳಿಗೆ ಮೇಲ್ಪಟ್ಟ ೮ಮಹಿಳೆಯರು ಮತ್ತು ಪುರುಷರ ಸಲಹಾ ಸಮಿತಿ ಸ್ಥಾಪಿಸಲಾಗಿದೆ

★

ವಿವಾಹಿತ ಹುಡುಗಿ

ಶಾಲೆಯಲ್ಲಿ ಯಾವ ಹುಡುಗಿಯು ಶಾಲೆಗೂ, ವಿವಾಹಿತ ಹುಡುಗಿಯನ್ನು ಸೇರಿಸಿಕೊಳ್ಳುತ್ತಿಲ್ಲ – ವಿವಾಹಿತಳಾದ ಒಬ್ಬ ವರ್ಷದ ಹುಡುಗಿಗೆ ಈ ಸ್ಥಿತಿ ಒದಗಿದೆ – ಇತರ ವಿದ್ಯಾರ್ಥಿನಿಯರು ವಿವಾಹಿತ ವಿದ್ಯಾರ್ಥಿಯಿಂದ ವಿವಾಹಿತ ಜೀವನ ರಹಸ್ಯವನ್ನು ಅರಿಯಲು ಪ್ರಯತ್ನಿಸುವರೆಂದು ಹೆಡ್ ಮಿಸ್ಟ್ರೆಸ್‌ರ ಹೇಳಿಕೆ.

★

ದಿವ್ಯವಾಣಿ

ಎಲ್ಲಿ ಸ್ವಾತಂತ್ರ್ಯವು ತೊಂದರೆಗೀಡಾಗುವುದೋ ಅಥವಾ ನ್ಯಾಯಕ್ಕೆ ಬೆದರಿಕೆ ಒದಗುವುದೋ ಅಥವಾ ಎಲ್ಲಿ ಅಕ್ರಮಣ ನಡೆಯುತ್ತದೋ, ಆಗ ನಾವು ತಟಸ್ಥರಾಗಿ ಕಲಾರೆವು, ತಟಸ್ಥರಾಗಿರುವುದಿಲ್ಲ.

— ಜವಹರಲಾಲ್ ನೆಹ್ರೂ

●

ಪೂನಾ — ಮಹಾರಾಷ್ಟ್ರ ಕರ್ನಾಟಕ ಗಡಿ ವ್ಯಾಜ್ಯದ ಕುರಿತು ಹೊಸ ಶ್ವೇತ ಪತ್ರವನ್ನು ಪ್ರಸರಿಸುವ ಅವಶ್ಯಕತೆ ಕುರಿತು ಮುಖ್ಯ ಮಂತ್ರಿ ಶ್ರೀ ಎಸ್ ಬಿ ಚವಣರು ಪತ್ರಿಕಾ ಸಂದರ್ಶನದಲ್ಲಿ ತಿಳಿಸಿದರು

○

ಜಾರ್ ಕೆಪಡಿ ವಿಷಯ ಬಾಂಬೆಯ ಹೈಕೋರ್ಟ್‌ನಲ್ಲಿ ವಿವಾಹವಾಗಿದ್ದ ಅರಿಸ್ಟಾಟಲ್ ಒನಾಸಿಸ್ ಫೈಥನಂರವರು.

(2)

ಮೂಲಭೂತ ಹಕ್ಕು

ನವದೆಹಲಿ– ಮುಖ್ಯ ಪಕ್ಷಿಕೆಯಲ್ಲಿ ರಾಜ್ಯವು ಮೂಲಭೂತ ಹಕ್ಕು ಕಿರುತ್ತ ಮಾಡುವ ಶಾಸನ ಮತ್ತು ಕೋರ್ಟು ಮೂಲಭೂತ ಹಕ್ಕು ಹರಣೆಯುವುದನ್ನು ಪ್ರತಿಬಂಧಿಸುವ ರಾಜ್ಯಾಂಗದ 358 ಮತ್ತು 359 ವಿಧಿಗಳನ್ನು ತೆಗೆಸುಹಾಕುವ ತಿದ್ದುಪಡಿ ಮಾಡಲು ಮಾಜಿ ಭಾರತದ ಮುಖ್ಯ ನ್ಯಾಯಾಧೀಶರಾದ ಶ್ರೀ ಕೆ. ಸುಬ್ಬಾರಾಯುಡು ಈ ಸಂಬಂಧದ ಸೆಮಿನಾರ್ ಉದ್ಘಾಟಿಸುತ್ತಾ ಕರೆಕೊಟ್ಟರು.

○

ಕಾನೂನು ಮಾಡುವುದು ||

ಅಹಮದಾಬಾದು– ಶಾಸನ ಸಭೆಗಳ ಮೂಲಕ ಕಾನೂನು ಮಾಡುವ ಈಗಿನ ಪದ್ಧತಿ ಅಷ್ಟು ಸರಿಯಾಗಿಲ್ಲವೆಂದೂ, ಇದಕ್ಕೆ ಲಾ ಕಮಿಷನ್ ಅವಶ್ಯಕವೆಂದೂ ಸು ಪ್ರೀಂ ಕೋರ್ಟು ಜಡ್ಜ್ ಶ್ರೀ ಕೃಷ್ಣಯ್ಯರ್ ಲಾ ಕಾಲೇಜಿನ ಸಮಾರಂಭದಲ್ಲಿ ನಡಾಡಿದ ಭಾಷಣದಲ್ಲಿ ಹೇಳಿದರು

*

ತಂದೆತಾಯಿಗಳಿಗೆ ಪಾರಿತೋಷಕ

ಚಂಡೀಘರ್— ವಿಶ್ವ ಕಪ್ ಗೆದ್ದ ಭಾರತದ ಹಾಕಿ ಟೀಮಿನಪ್ರತಿ ಆಟಗಾರರ ತಂದೆತಾಯಿಗಳಿಗೆ ತಲಾ ರೂ 5000 ಪಾರಿತೋಷಕ ಕೊಡುವುದಾಗಿ ಪಂಜಾಬು ಮುಖ್ಯ ಮಂತ್ರಿ ಶ್ರೀ ಜ್ಞೈಲ್ ಸಿಂಗ್ ಪ್ರಕಟಿಸಿರುವರು.

ಕರ್ನಾಟಕ ಅರಣ್ಯ ಇಲಾಖೆ

ಚಾ ಮ ರಾ ಜ ನ ಗ ರ ವಿ ಭಾ ಗ

ವಿಭಾಗ ಅರಣ್ಯ ಅಧಿಕಾರಿಯವರ ಕಚೇರಿ, ಚಾಮರಾಜನಗರ

ಅಬ್ಸ್ಟ್ರಾಕ್ಟ್ ಟೆಂಡರ್ ಪ್ರಕಟಣೆ

ತಾ|| 1 ನೇ ಮಾರ್ಚ್ 1975 1975-76 ನೇ ಸಾಲಿನಲ್ಲಿ ಚಾಮರಾಜನಗರ ವಿಭಾಗದಲ್ಲಿ ಮರದ ಲಾಗಿಂಗ್ ಕಾರ್ಯಾಚರಣೆಗಾಗಿ

ಗುರುತು ಹಾಕಿರುವ ಮರಗಳನ್ನು ಕತ್ತರಿಸುವುದಕ್ಕೆ, ಬೀಟಿ ಮರಗಳನ್ನು ಬುಡಸಹಿತ ಕೀಳುವುದು ಸೇರಿ ಸಿದ್ಧ ಪಡಿಸುವುದು. ಸಾಗಾಣಿಕೆ ಮಾಡುವುದು ಮತ್ತು ವಿಭಾಗದಲ್ಲಿರುವ ಮಾರಾಟ ಡಿಪೋಗಳಲ್ಲಿ ಇಲಾಖೆ ವಿವರಣೆಗಳ ಪ್ರಕಾರ ಅವನ್ನು ಲಾಟಿಂಗ್ ಮಾಡುವಂತೆ ಈ ಕೆಲಸಗಳಿಗಾಗಿ ಚಾಮರಾಜನಗರದಲ್ಲಿರುವ ವಿಭಾಗ ಅರಣ್ಯ ಅಧಿಕಾರಿಯವರಿಂದಾಗಲೀ ಅಥವಾ ಈ ಉದ್ದೇಶಕ್ಕಾಗಿ ಅಧಿಕಾರ ಹೊಂದಿರುವ ಮತ್ತಾವುದೇ ಅಧಿಕಾರಿಯವರಿಂದಾಗಲೀ ಈ ಕಚೇರಿಯಲ್ಲಿ 22-3-1975 ರ ಮಧ್ಯಾಹ್ನ 4 ಗಂ ಟಿ ವರೆಗೆ ಚಾಮರಾಜನಗರದಲ್ಲಿರುವ ವಿಭಾಗ ಅರಣ್ಯ ಅಧಿಕಾರಿಗಳಿಂದ ಅಹ್ವಾನಿಸಲಾಗಿರುವ ನೋಟ್ಸ್‌ಡಂತೆ ಸರಿಯಾಗಿ ಹೆಸರು ಬರೆದಿರುವ ಮೊಹರಾದ ಟೆಂಡರ್‌ಗಳು ಅಪೇಕ್ಷೆಯುಳ್ಳ ಕಂಟ್ರಾಕ್ಟರ್‌ಗಳಿಂದ ಸ್ವೀಕರಿಸಲ್ಪಡುವುವು.

ಪ್ರದೇಶ, ಪ್ರಮಾಣ, ಸಾಗಾಣಿಕೆ ಮಾಡಬೇಕಾದ ಡಿಪೋ, ಲೀಡ್, ಕಾಲಾವಕಾಶ, ಹರಜ್ಜುಗಳು ಇತ್ಯಾದಿಗಳ ವಿಚಾರಗಳಲ್ಲಿ ವಿವರಗಳನ್ನು ಈ ಕಚೇರಿಯಿಂದ ಕಚೇರಿ ಕೆಲಸದ ವೇಳೆಗಳಲ್ಲಿ ಪಡೆಯಬಹುದು.

ಎಸ್ ಮಹಮ್ಮದ್ ಅಹಮದ್,
ವಿಭಾಗ ಅರಣ್ಯ ಅಧಿಕಾರಿಯವರು, ಚಾಮರಾಜನಗರ.

Contribute Liberally
to the National Defence Fund

Quality Printing Neat Binding

Lakshminarasimha Press

Sivarampet Mysore

ವುಡ್‌ಲಾಂಡ್ಸ್ 14 3 75 ರಿಂದ
ಅಮೋಘ 3 ನೇ ವಾರ
ದಾರಿ ತಪ್ಪಿದ ಮಗ

ಅಪೂರ್ವ ಕನ್ನಡ ಕಲಾಕೃತಿ ಪಾತ್ರ– ರಾಜಕುಮಾರ್ (ತ್ರಿಪಾತ್ರದಲ್ಲಿ)

ಪಜ್ಜಮುಖಿ, ಅಕ್ಕಸ್, ಬಾಲಕೃಷ್ಣ, ಕಲ್ಪನ, ಅಶ್ವತ್ ಇನ್ನಿತರ ಪ್ರದರ್ಶನಗಳು

ಅಪೆರಾ 14 3 75 ರಿಂದ
ಪಣಕೋಟಂ

★

ಅಮೋಘ ತಮಿಳು ಚಿತ್ರ

ಹೊಸ ಕಾಪಿ ದಿನ 3 ಪ್ರದರ್ಶನಗಳು

ಭಾರತದಲ್ಲಿ ಗೋವಧೆ
ಪೂರ್ಣ ನಿಷೇಧವಾಗಲಿ



Protect the Cow
Help The Gorakshana

—Humanitarian Propoganda Monthly—

Edited Printed and Published by Dharmacharanirata M S Krishna Rao (Proprietor) at the Satyavadi Press, Chamarajapuram Mysore